ಇಂದು ದಿನಾಂಕಃ **21.02.2019** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಆರೋಪಿ ನನ್ನ ಬಳಿ ಕಷ್ಟ ಎಂದು ಹೇಳಿದ್ದರಿಂದ ಹಣವನ್ನು ನೀಡಿರುತ್ತೇನೆ. ಯಾವ ರೀತಿ ಕಷ್ಟ ಎಂದು ಆರೋಪಿ ನನ್ನ ಬಳಿ ತಿಳಿಸಿರುವುದಿಲ್ಲ. ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸುವ ಮೊದಲು ಆರೋಪಿಯನ್ನು ವಿಚಾರ ಮಾಡಿರುವುದಿಲ್ಲ. ನಗದೀಕರಣಕ್ಕಾಗಿ ಚೆಕ್ಕನ್ನು ಬ್ಯಾಂಕಿಗೆ ಸಲ್ಲಿಸುವ ಪೂರ್ವದಲ್ಲಿ ಆರೋಪಿಗೆ ವಿಚಾರವನ್ನು ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ ದಿನಾಂಕವನ್ನು ನಮೂದಿಸಿ ಚೆಕ್ಕನ್ನು ನೀಡಿದ್ದರು. ಚೆಕ್ಕು ಅಮಾನ್ಯವಾದ ಬಗ್ಗೆ ವಕೀಲರ ಮುಖಾಂತರ ಆರೋಪಿಗೆ ನೋಟೀಸನುನ ಕೊಡಿಸಿದ್ದೇನೆ. ನೋಟೀಸಿನಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ದೂರಿನಲ್ಲಿ ನಮೂದಿಸಿರುವ ವಿಚಾರಗಳು ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಸಲ್ಲಿಸಿರುವ ವಿಚಾರಗಳು ಗೊತ್ತೇ ಎಂದರೆ **80** ಸಾವಿರ ಹಣವನ್ನು ಆರೋಪಿ ಮರು ಪಾವತಿಸಬೇಕೆಂದು ಬರೆಯಲಾಗಿರುತ್ತದೆ, ಉಳಿಕೆ ವಿಚಾರಗಳು ಗೊತ್ತಿಲ್ಲ. ನಾನು ಆಟೋ ಚಾಲಕ ಮತ್ತು ಆಟೋ ಚಾಲನೆಯಿಂದ ನಾನು ಸಂಪಾದಿಸುತ್ತೇನೆಂದು ತೋರಿಸುವ ದಾಖಲೆಯನ್ನು ನ್ಯಾಕ್ಕೆ ಹಾಜರು ಮಾಡಿಲ್ಲ. ನ್ಯಾಕ್ಕೆ ಆರೋಪಿ ನೀಡಿರುವ ಚೆಕ್ಕು ಮತ್ತು ಬ್ಯಾಂಕಿನವರು ನೀಡಿರುವ ಹಿಂಬರವನ್ನು ಹಾಜರು ಮಾಡಿರುತ್ತೇನೆ. ಸದರಿ ಚೆಕ್ಕಿನ ಸಂಖ್ಯೆಯನ್ನು ಹೇಳಲು ಆಗುವುದಿಲ್ಲ, ಈಗ ಮರೆತಿರುತ್ತೇನೆ. ನಿಪಿ **1**(ಎ) ಎಂದು ಗುರುತಿಸಲಾಗಿರುವ ಸಹಿಯ ಇಂಕಿಗೂ, ನಿಪಿ **1** ರ ಒಕ್ಕಣೆಯನ್ನು ಬರೆದಿರುವ ಇಂಕಿಗೂ ವ್ಯತ್ಯಾಸವಿದೆ ಎಂದರೆ ಸರಿ. ಆರೋಪಿ ನಿಪಿ **1** ರ ಒಕ್ಕಣೆಯನ್ನು ಮೊದಲೇ ಬರೆಸಿಕೊಂಡು ಬಂದಿದ್ದರು. ನಿಪಿ **1** ರ ಒಕ್ಕಣೆಯನ್ನು ಆರೋಪಿ ಬರೆದಿಲ್ಲ ಎಂದರೆ ಗೊತ್ತಿಲ್ಲ. ನನ್ನ ಸಮಕ್ಷಮ ನಿಪಿ **1** ರ ಒಕ್ಕಣೆಯನ್ನು ಬರೆಸಿಕೊಳ್ಳಲು ತೊಂದರೆ ಇರಲಿಲ್ಲ, ಆದರೆ ಮೊದಲೇ ಬರೆಸಿಕೊಂಡು ಬಂದಿದ್ದರು. ನಾನು ಆರೋಪಿಯ ತಾಯಿಗೆ ನೀಡಿದದ **5** ಸಾವಿರ ರೂ.ಗಳ ಭದ್ರತೆಗೆ ಆರೋಪಿಯ ಚೆಕ್ಕನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಯ ತಾಯಿಗೆ ಹಣವನ್ನು ನೀಡಿಲ್ಲ. ಆರೋಪಿಯ ತಾಯಿಗೆ ನೀಡಿದ ಹಣದ ಭದ್ರತೆಗಾಗಿ ನಿಪಿ **1** ನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕಿನವರು ಹಿಂಬರಹವನ್ನು ದಿಃ **29.08.2017** ರಂದು ನೀಡಿರುತ್ತಾರೆ. ಚೆಕ್ಕು ಅಮಾನ್ಯವಾದ ಬಗ್ಗೆ ಆರೋಪಿಗೆ ತಿಳಿಸಿರುತ್ತೀರಾ ಎಂದರೆ, ದೂರವಾಣಿ ಕರೆ ಮಾಡಿರುತ್ತೇನೆ, ಸ್ವೀಕರಿಸಿರುವುದಿಲ್ಲ. ನಾನು ಖುದ್ದಾಗಿ ಆರೋಪಿಗೆ ಹಣವನ್ನು ಹಿಂತಿರುಗಿಸುವಂತೆ ಕೇಳಿರುವುದಿಲ್ಲ. ಆರೋಪಿಯ ತಾಯಿ ತಾನು ಪಡೆದಿರುವ ಹಣವನ್ನು ಹಿಂತಿರುಗಿಸಿದ್ದರೂ ಸಹ ಅನ್ಯತಾ ಫಾಯಿದೆ ಹೊಂದುವ ಉದ್ದೇಶದಿಂದ ಆರೋಪಿಯ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. **80** ಸಾವಿರ

ಸಾಲವನ್ನು ನೀಡಲು ನನಗೆ ಯಾವುದೇ ಆದಾಯ ಇರುವುದಿಲ್ಲ, ಅನ್ಯತಾ ಫಾಯಿದೆ ಹೊಂದುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ವಕೀಲರ ಮುಖಾಂತರ ನೀಡಿರುವ ನೋಟೀಸು ದಿಃ **08.09.2017** ರಂದು ಆರೋಪಿಗೆ ಜಾರಿಯಾಗಿರುತ್ತದೆ. ಅನ್ಯತಾ ಫಾಯಿದೆ ಹೊಂದುವ ಉದ್ದೇಶದಿಂದ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಹಣವನ್ನು ಕೊಡುವ ಸಂದರ್ಭದಲ್ಲಿ ನಾನು, ನನ್ನ ಹೆಂಡತಿಯನ್ನು ಹೊರತುಪಡಿಸಿ ಬೇರೆ ಯಾರೂ ಇರುವುದಿಲ್ಲ. ಆರೋಪಿಗೆ ಹಣ ಕೊಡದೇ ಇದ್ದರೂ ಸುಳ್ಳು ಕಥೆಯನ್ನು ನ್ಯಾದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.